**3ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ**

**SC.124/2022**

ದಿಃ 11.03.2026.
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

**Cw-5 Pw-6**

| | | |
|---|---|---|
| ಹೆಸರು | ಃ | ಮಹದೇವಸ್ವಾಮಿ |
| ತಂದೆಯ ಹೆಸರು | ಃ | ರೇಣುಕಾರಾಧ್ಯ |
| ವಯಸ್ಸು | ಃ | 36 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸಸ್ಥಳ | ಃ | ಕಟುಕನ ಪಾಳ್ಯ, ಮಾಗಡಿ ತಾಲ್ಲೂಕು. |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ಸಾಕ್ಷಿ ನಿ ಪಿ 2 ರಲ್ಲಿ ಇರುವಂತಹ ಸನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಸಹಿಯನ್ನು ನಿಪಿ **2(**ಸಿ**)** ಎಂದು ಗುರುತಿಸಲಾಯಿತು. ಈಗ ಸುಮಾರು 2-3 ವರ್ಷಗಳ ಹಿಂದೆ ಕಟುಕನಾಪಾಳ್ಯದಲ್ಲಿ ಇರುವಂತಹ ನನ್ನ ಜಮೀನಿನ ಕಡೆ ಹೋಗುವ ಸಮಯದಲ್ಲಿ ಯಳವಯ್ಯನ ಮನೆ ಬಳಿ ಸಂಜೆ 3.30 ರಿಂದ 4.00 ಗಂಟೆ ಸಮಯದಲ್ಲಿ ಪೋಲೀಸರು ಯಳವಯ್ಯನ ಮನೆಯವರಿಗೆ ಮತ್ತು ಅವರ ಅಣ್ಣ ತಮ್ಮಂದಿರಿಗೆ ಜಗಳವಾಗಿದೆ ಎಂಬ ವಿಚಾರವಾಗಿ ಬಂದಿದ್ದರು. ನಾನು ತೋಟದ ಕಡೆಗೆ ಹೋಗುತ್ತಿದ್ದ ಕಾರಣ ಪೋಲೀಸರು ಸಹಿ ಮಾಡಲು ಹೇಳಿದ್ದ ಕಾರಣ ಸಹಿ ಮಾಡಿ ಅಲ್ಲಿಂದ ಹೊರಟೆ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ವಿಚಾರ ತಿಳಿದಿರುವುದಿಲ್ಲ.

**(**ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅಭಿಯೋಜಕರು ಕೋರಿದ್ದಾರೆ. ಅದರಂತೆ ಸಾಕ್ಷಿಯನ್ನು ಪ್ರತಿಕೂಲ

ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ

2. ದಿಃ 01.07.2022 ರಂದು ಕುಟುಕನಪಾಳ್ಯದ ಯಳವಯ್ಯನ ಮನೆಯ ಹಿಂಭಾಗ ಖಾಲಿ ಜಾಗದಲ್ಲಿ ಪೋಲೀಸರು ಬಂದಿದ್ದು ಆ ಸ್ಥಳವನ್ನು ಬರಿಯಯ್ಯ ತೋರಿಸಿದ್ದು ಸದರಿ ಸ್ಥಳವನ್ನು ಅಜಮಾಯಿಸಿ ಪೋಲೀಸರು ಪಂಚನಾಮೆ ಮಾಡಿದ್ದರು ಎಂದರೆ ಸರಿ. ಆರೋಪಿಗಳೆಲ್ಲಾ ಸೇರಿ ಅಟ್ಟಿ ಬರಿಯನಿಗೆ ಹೊಡೆದಂತಹ ಸ್ಥಳ ಅದು ಎಂದು ತನಿಖೆಯ ಸಂಬಂಧವಾಗಿ ಸ್ಥಳಕ್ಕೆ ಬಂದಿದ್ದರು ಎಂದರೆ ಸಾಕ್ಷಿ ಬಂದಿದ್ದರೆ ಬಂದಿರಬಹುದು ಎಂದು ಉತ್ತರಿಸಿರುತ್ತಾರೆ. ಅಲ್ಲಿ ಸ್ಥಳದಲ್ಲಿ ಎರಡು ರಿಪೀಸ್ ಪಟ್ಟಿಗಳನ್ನು ಪೋಲೀಸರು ವಶಪಡಿಸಿಕೊಂಡರು ಎಂದರ ನನಗೆ ಗೊತ್ತಿಲ್ಲ. ಅದನ್ನೆಲ್ಲಾ ಪೋಲೀಸರು ಬರೆದುಕೊಂಡು ನಾನು ಓದಿ ನೋಡಿದ ನಂತರ ಸಹಿ ಮಾಡಿರುತ್ತೇನೆ ಎಂದರೆ ಗೊತ್ತಿಲ್ಲ. ಎಲ್ಲಾ ವಿಚಾರ ತಿಳಿದಿದ್ದರೂ ಸಹ ಈಗ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಇರುವುದಿಲ್ಲ.

ಮರು ವಿಚಾರಣೆ ಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಪಂಚಾಕ್ಷರಿ.ಎಂ.)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು

C/c 3ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ರಾಮನಗರ.